**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸೋಮವಾರಪೇಟೆ**

**ಸಿ.ಸಿ. ನಂ. 511/2024**

| | | |
|---|---|---|
| ಹೆಸರು | : ಉದಯ ಸಿ ಎಮ್ | ಪಿಡಬ್ಲ್ಯೂ-2 |
| ತಂದೆಯ ಹೆಸರು | : ಮಂದಣ್ಣ ಸಿಕೆ | ಸಿಡಬ್ಲ್ಯೂ-2 |
| ವಯಸ್ಸು | : 52 ವರ್ಷ | |
| ವೃತ್ತಿ | : ಮುಖ್ಯ ಪೇದೆ | |
| ವಾಸ ಸ್ಥಳ | : ಕುಶಾಲನಗರ | |

**ದಿಃ 09.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:**

ನಾನು 2024 ರಿಂದ ಇಲ್ಲಿಯವರೆಗೆ ಸೋಮವಾರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪುರಕಣಕ್ಕೆ ಸಂಬಂಧ ಪಟ್ಟಂತೆ ದಿಃ26.08.2024 ರಂದು ನಾನು ಠಾಣಾ ಉಸ್ತುವಾರಿಯಲ್ಲಿದ್ದಾಗ ಸಮಯ 11.15 ಗಂಟೆಗೆ ಚಾಸಾ 1 ರವರು ನೀಡಿದ ವರದಿಯನ್ನು ಹೊಂದಿಕೊಂಡು ಠಾಣಾ ಮೊಕದ್ದಮೆ ಸಂಖ್ಯೆ 96/2024 ರಂತೆ ಆರೋಪಿಯ ವಿರುದ್ದ ಪ್ರಕರಣವನ್ನು ದಾಖಲಿಸಿಕೊಂಡು ನಂತರ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕ ಸಲ್ಲಿಸಿರುತ್ತೇನೆ. ದೂರನ್ನು ನಿಪಿ 4,ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ 5 ಎಂದು ಗುರುತಿಸಲಾಯಿತು. ನಿಪಿ 4 ರಲ್ಲಿ ಚಾಸಾ 1 ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ 1 ರವರಿಗೆ ನೀಡಿರುತ್ತೇನೆ.

**ಪಾಟೀ ಸವಾಲುಃ ಶ್ರೀ ಕೆ ಎಸ್ ಪಿ  ವಕೀಲರಿಂದ:**

ಚಾಸಾ 1 ರವರು ನೀಡಿರುವ ಸುಳ್ಳು ದೂರನ್ನು ಹೊಂದಿಕೊಂಡು ಆರೋಪಿಯ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.
**)**

**ಓ.ಹೇ.ಕೇ.ಸರಿ ಇದೆ.**

**ಸಹಿ/-**
**ಸಿ.ಜೆ.ಮತ್ತು ಪ್ರ.ದ.ನ್ಯಾ .ದಂ**
**ಸೋಮವಾರಪೇಟೆ**